# ಚಿತ್ರಾಂಗದೆಯ ಚೆಲುವಿನ ಮದನನ ಕರುಣೆಯ ಸ್ಪರ್ಶ



## ಚೆಲ್ವರಳುವಂತೆನ್ನ ಪಸದನಂಗೈ

ಆಗ ಮಣಲೂರಿನ ರಾಜನಂದಿನಿ ಚಿತ್ರಾಂಗದೆಯು ತನ್ನ ನೆಚ್ಚಿನ ಪಸಾಯಿತೆಯನ್ನು (ರಾಣಿಯ ಕೃಪೆಗೆ ಪಾತ್ರಳಾದವಳು) ಪ್ರತ್ಯೇಕವಾಗಿ ಕರೆದು ಹೇಳಿದಳು: 'ಹೆಣ್ಣುತನಕ್ಕೆ ಒಪ್ಪುವಂತೆ ಮತ್ತು ಚೆಲುವು ಅರಳುವಂತೆ ನನ್ನನ್ನು ಅಲಂಕರಿಸು.' ಆ ಸಖಿಯು ತನ್ನ ಒಡತಿಯ ವಿಶೇಷ ಆಕಾಂಕ್ಷೆಗೆ ಆಶ್ಚರ್ಯಪಡುತ್ತ ಶೃಂಗರಿಸಿದಳು.

ಕುಮಾರಿಯು ವೀರತನ ಸೂಚಕ ಗಂಡುಡುಗೆಯನ್ನು ತೆಗೆದು ಹಾಕಿದಳು. ನೀರಿನ ಮೇಲೆ ಬೆಳೆಯುವ ಪಾಚಿ (ಶೈವಾಲ)ಯು ಆವರಿಸಿದ ಎಳೆಯ ತಾವರೆಯಂತೆ ಸುಂದರವಾಗಿ ಆಹ್ಲಾದವನ್ನು ಬೀರುತ್ತ ಮೆರೆಯುವ ರೇಷ್ಮೆ ಬಟ್ಟೆಯನ್ನು ತೊಟ್ಟುಕೊಂಡಳು. ಕೈಗೆ ಚೆನ್ನದ ಬಳೆಗಳನ್ನು, ಕಾಲಿಗೆ ಕಿಂಕಿಣಿ ಗಾನವನ್ನುಂಟು ಮಾಡುವ ಮಣಿನೂಪುರಗಳನ್ನು ಧರಿಸಿಕೊಂಡಳು. ಮೋಡಗಳಿಂದ ತುಂಬಿ ಶೋಭಿಸುವ ಅಂತರಿಕ್ಷದ ಲಕ್ಷ್ಮಿಯ ಸೊಂಟದ ನಡುಪಟ್ಟಿ ಕಾಮನಬಿಲ್ಲಿನಿಂದ ಹೇಗೆ ಹೊಳೆಯುತ್ತದೆಯೊ ಹಾಗೆ ಅವಳು ಸೊಂಟಕ್ಕೆ ಮನೋಹರವಾದ ರತ್ನಮಯ ಬಂಗಾರದ ಡಾಬನ್ನು ತೊಟ್ಟುಕೊಂಡಳು. ಕೊರಳಿಗೆ ಮುತ್ತಿನ ಸರವನ್ನು ಹಾಕಿಕೊಂಡಳು. ಶರತ್ಕಾಲದ ರವಿಯು ಬಂಗಾರ ಕಿರಣಗಳಿಂದ ಕಮಲಪತ್ರದ ತುದಿಯ ನೀರಿನ ಹನಿಯನ್ನು ಹೊಳೆಯಿಸುವಂತೆ, ಅವಳು ಕಿವಿಗೆ ತೊಟ್ಟಿದ್ದ ಸೊಗಸಾದ ಮುತ್ತುಗಳು ಶೋಭಿಸುತ್ತಿದ್ದವು.

ಕಗ್ಗತ್ತಲೆಯ ರಾತ್ರಿ ನಕ್ಷತ್ರ ಮಾಲೆಯಿಂದ ಮೆರೆಯುವಂತೆ ಮತ್ತು ಉಷೆಯ ಹಣೆಯಲ್ಲಿ ಬೆಳ್ಳಿ ಚುಕ್ಕೆಯೊಂದೇ ಮಿನುಗುವ ರೀತಿಯಲ್ಲಿ ಸಖಿಯು ಅವಳ ತಲೆಗೂದಲನ್ನು ಹೂವುಗಳಿಂದ ಅಲಂಕರಿಸಿದಳು. ಶಿಶಿರವನ್ನು ಕಳೆದ ಬನದ ಸಿರಿಯು ಸುಂದರ ವಸಂತವನ್ನು ಹೊಂದಿ ರಾರಾಜಿಸುವಂತೆ ಆ ರಾಜಕುಮಾರಿಯು ಹಣೆಯಲ್ಲಿ ಚಂದ್ರ ಕುಂಕುಮ ಬಿಂದುವನ್ನಿಟ್ಟುಕೊಂಡು ಶೋಭಿಸುತ್ತಿದ್ದಳು.

ಸಿರಿವೆಣ್ಣೆಗಿನಿಯನ ಜಯಿಸೆ ಚೆಲುವಿನಲಗೊಂದಿರಲ್ ಬೇರೆ ಕೂರಂಬೇಕೆ?

ರತ್ನಖಚಿತವಾದ ಕನ್ನಡಿಯಲ್ಲಿ ತನ್ನ ಪ್ರತಿಬಿಂಬವು ಕಾಣಿಸುತ್ತಿರಲು ಕನ್ನೆಯ ಮೊಗದಲ್ಲಿ ನಗೆಯ ಮೊಗ್ಗು ಅರಳಿ ಹೂವಾಯಿತು. ಚೆನ್ನೆ ಚಿತ್ರಾಂಗದೆಯು ತನ್ನ ಚೆಲುವಿಗೆ ತಾನೆ ಸೋಜಿಗಗೊಂಡಳು. ಕಣ್ಣುಗಳನ್ನು ನೆಟ್ಟು ಅಚ್ಚರಿಯನ್ನು ಆಲಿಸಿದಳು!

ತನ್ನ ಬಳಿ ಸಖಿಯಿರುವುದನ್ನು ಮರೆತಳು. ಮತ್ತೆ ಬೇರೆಯವರ ಎದುರು ಪ್ರಶಂಸೆಯು ಕೀಳುತನವೆಂದು ತಿಳಿದಿದ್ದರೂ, ಲೆಕ್ಕಿಸದೆ ಕನ್ನೆಯು ತನ್ನನ್ನು ತಾನು ತನಗೆ ಅನ್ಯಳು ಎನ್ನುವಂತೆ ನೋಡುತ್ತಿದ್ದಳು!